# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **246** |
| ಉತ್ತರಿಸಬೇಕಾದ ದಿನಾಂಕ | : | 09.12.2020 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಆಶ್ರಯ ಮನೆಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆಯೇ, ಆಗಿದ್ದಲ್ಲಿ ಸರ್ಕಾರ ತೆಗೆದು ಕೊಂಡ ಕ್ರಮಗಳೇನು, ಅರ್ಜಿ ಹಾಕದವರಿಗೆ ಮತ್ತೆ ಅವಕಾಶವಿದೆಯೇ | ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಆಶ್ರಯ ಮನೆಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆನ್ ಲೈನ್ ಮುಖಾಂತರ ಆಹ್ವಾನಿಸಲಾಗಿದೆ.<br><br>ಗೋವಿಂದಾಪುರದಲ್ಲಿ 3,000 ಮನೆಗಳು ಗೋಪಿಶೆಟ್ಟಿ ಕೊಪ್ಪದಲ್ಲಿ 1,836 ಒಟ್ಟು 4,836 ಮನೆಗಳಿಗೆ ಸರ್ಕಾರದಿಂದ ಮಂಜೂರಾತಿ ಆಗಿರುತ್ತದೆ.<br><br>ಈಗಾಗಲೇ ಸದರಿ ಯೋಜನೆ ಫಲಾನುಭವಿಗಳ ಆಯ್ಕೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಇದರಲ್ಲಿ 2,696 ಫಲಾನುಭವಿಗಳಿಂದ ಪೂರ್ಣವಂತಿಕೆ ಸಂದಾಯವಾಗಿರುತ್ತದೆ.<br><br>ಬಾಕಿ 2140 ಮನೆಗಳಿಗೆ ಫಲಾನುಭವಿಗಳ ಆಯ್ಕೆಗಾಗಿ ಈಗಾಗಲೇ ಅರ್ಜಿ ಸಲ್ಲಿಸಿದ 3142 ಫಲಾನುಭವಿಗಳಿಗೆ ಪೂರ್ಣವಂತಿಕೆ ಹಣವನ್ನು ಪಾವತಿಸಲು 05 ನವೆಂಬರ್ 2020 ರಂದು ಪತ್ರಿಕೆ ಪ್ರಕಟಣೆ ಮೂಲಕ ತಿಳಿಸಲಾಗಿದ್ದು 31 ನೇ ಡಿಸೆಂಬರ್ 2020 ರವರೆಗೆ ಅವಕಾಶವನ್ನು ನೀಡಲಾಗಿರುತ್ತದೆ. ನಂತರದಲ್ಲಿ ಪೂರ್ಣವಂತಿಕೆ ಪಾವತಿಸದ ಬಾಕಿ ಮನೆಗಳಿಗೆ ಪುನಃ ಅರ್ಜಿ ಆಹ್ವಾನಿಸಲಾಗುವುದು. |
| ಆ) | ಶಿವಮೊಗ್ಗ ಮಹಾ ನಗರಪಾಲಿಕೆಯ ವ್ಯಾಪ್ತಿಯಲ್ಲಿ ಅರ್ಜಿ ಸಲ್ಲಿಸಿ ಆಯ್ಕೆಯಾದಂತಹ ಫಲಾನುಭವಿಗಳಲ್ಲಿ ರೂ. 80,000/-ಗಳ ಹಣವನ್ನು ಪಾವತಿಸಿರುವವರ ಸಂಖ್ಯೆ ಎಷ್ಟು; | ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಫಲಾನುಭವಿಗಳ ವಂತಿಕೆ ರೂಪದಲ್ಲಿ ರೂ.80,000/-. ಪ.ಜಾ/ಪ.ಪಂ ವರ್ಗದ ಫಲಾನುಭವಿಗಳಿಂದ ಫಲಾನುಭವಿಗಳ ವಂತಿಕೆ ರೂಪದಲ್ಲಿ ರೂ. 50,000/-ಗಳನ್ನು ಪಾವತಿಸಿ ಕೊಳ್ಳಲಾಗುತ್ತಿದೆ. ಸಾಮಾನ್ಯ ವರ್ಗದ 1718 ಫಲಾನುಭವಿಗಳಿಂದ ರೂ.13,74,44,000/- ಮತ್ತು ಪ.ಜಾ/ಪ.ಪಂ ವರ್ಗದ 978 ಫಲಾನಿಭವಿಗಳಿಂದ ರೂ.4,89,00,000/-ಗಳು ಒಟ್ಟು ರೂ.18,63,44,000/-ಗಳು ಸಂದಾಯವಾಗಿರುತ್ತದೆ, |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಯಾವ ದಿನಾಂಕದಿಂದ ಹಣವನ್ನು ಪಾವತಿಸಿರುತ್ತಾರೆ. | ದಿನಾಂಕ:08-01-2018 ರಿಂದ ಹಣವನ್ನು ಪಾವತಿಸಿರುತ್ತಾರೆ. |
| ಈ) | ಆಶ್ರಯ ಮನೆಗಳ ಕಾಮಗಾರಿಗಳು ಪ್ರಾರಂಭವಾಗಿವೆಯೇ. ಆಗದಿದ್ದಲ್ಲಿ ಹಣ ಸಂದಾಯ ಮಾಡಿರುವವರಿಗೆ ಯಾವ ಕಾಲಮಿತಿಯೊಳಗೆ ಮನೆಗಳನ್ನು ಹಂಚಿಕೆ ಮಾಡಲಾಗುವುದು; | ಆಶ್ರಯ ಯೋಜನೆಯಡಿ 24 ಜಿ+2 ಮಾದರಿ 24 ಮನೆಗಳು ಪ್ರಗತಿ ಹಂತದಲ್ಲಿದ್ದು, ಉಳಿದ 3000 ಜಿ+2 ಮನೆಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ ಹಾಗೂ ಅರ್ಹ ಗುತ್ತಿಗೆದಾರರಿಗೆ ತಾಂತ್ರಿಕ ಅನುಮೋದನೆಯಾಗಿದ್ದು, ಆರ್ಥಿಕ ಅನುಮೋದನೆಯು ಸಹ ದಿನಾಂಕಃ 25/11/2020 ರಂದು ನಡೆದ 25 ನೇ S.L.S.M.C ರವರಿಂದ ಅನುಮೋದನೆಯಾಗಿರುತ್ತದೆ..<br><br>ಯೋಜನೆಯನ್ನು ಪೂರ್ಣಗೊಳಿಸಲು ಎರಡು ವರ್ಷ ಕಾಲಾವಕಾಶವಿರುತ್ತದೆ. ನಂತರದಲ್ಲಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು. |
| ಉ) | ಈ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ? | ರೂ. 29.01 ಕೋಟಿಗಳು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುತ್ತದೆ. |

ಸಂಖ್ಯೆ :ವಇ 409 ಹೆಚ್‌ಎಎಂ 2020

(ವಿ. ಸೋಮಣ್ಣ)
ವಸತಿ ಸಚಿವರು